# 0776/0754/0748

**Seventh Semester 5 Year B.A. LL.B./B.B.A. LL.B. (Hons.) Examination, December 2016**

**Clinical Course – I : PROFESSIONAL ETHICS**

Duration : 2½ Hours

Max. Marks : 80

**Instructions** : 1. Answer Q. No. **8** and **any five** of the remaining questions.

2. Question No. **8** carries **20** marks and the remaining carry **12** marks **each**.

3. Answers should be written either in **English** or in **Kannada completely**.

Q. No. 1. What is 'profession' ? Critically analyse the essential characteristics of 'profession' in the context of legal profession.

ವೃತ್ತಿ ಎಂದರೇನು ? ಕಾನೂನು ವೃತ್ತಿಯ ಹಿನ್ನೆಲೆಯಲ್ಲಿ 'ವೃತ್ತಿ'ಯ ಅವಶ್ಯಕ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

Q. No. 2. State and elucidate the functions of Bar Council of India.

ಭಾರತೀಯ ವಕೀಲ ಪರಿಷತ್ತಿನ ಪ್ರಕಾರ್ಯಗಳನ್ನು ಹೆಸರಿಸಿ ಮತ್ತು ವಿಶದೀಕರಿಸಿ.

Q. No. 3. What is 'solicit of work' ? Explain BCI standards for professional conduct and etiquette on solicit of work.

'ಕೆಲಸಕ್ಕಾಗಿ ಕೋರಿಕೆ' ಎಂದರೇನು ? ಕೆಲಸಕ್ಕಾಗಿ ಕೋರಿಕೆ ಬಗೆಗಿನ ಭಾರತೀಯ ವಕೀಲರ ಪರಿಷತ್ತಿನ ವೃತ್ತಿ ನಡತೆ ಮತ್ತು ಸಂಹಿತೆ ನಿಯಮಗಳನ್ನು ವಿವರಿಸಿ.

Q. No. 4. Define right to practice. Comment on its legal status in India in the backdrop of recent developments.

ಕಾನೂನು ವೃತ್ತಿಯ ಅಭ್ಯಾಸದ ಹಕ್ಕನ್ನು ವ್ಯಾಖ್ಯಾನಿಸಿ. ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅದರ ಕಾನೂನು ಸ್ಥಾನಮಾನವನ್ನು ಟೀಕಿಸಿ.

Q. No. 5. Discuss 'conflict of interest' rule with the help of Chandra Shekara Soni case.

ಚಂದ್ರಶೇಖರ ಸೋನಿ ಪ್ರಕರಣದ ಸಹಾಯದಿಂದ ''ಸಂಘರ್ಷ ಹಿತಾಸಕ್ತಿ'' ನಿಯಮವನ್ನು ಚರ್ಚಿಸಿ.

Q. No. 6. Discuss the implications of business like practices on legal profession.

ಕಾನೂನು ವೃತ್ತಿಯಲ್ಲಿ ವಾಣಿಜ್ಯ ಹೋಲಿಕೆಯ ಪದ್ಧತಿಗಳನ್ನು ಅನುಸರಿಸುವುದರಿಂದ ಕಾನೂನು ವೃತ್ತಿಯ ಮೇಲಿನ ಪರಿಣಾಮಗಳನ್ನು ಚರ್ಚಿಸಿ.

Q. No. 7. Write short notes on **any two** of the following :

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Doctrine of subjudice.

'ಸಬ್‌ಜ್ಯೂಡಯ್ಸ್' ಸಿದ್ಧಾಂತ.

b) Disciplinary Committee.

ಶಿಸ್ತುಕ್ರಮ ಸಮಿತಿ.

c) Work Product Theory.

ಶ್ರಮೋತ್ಪಾದನಾ ಸಿದ್ಧಾಂತ.

Q. No. 8. Solve **any two** of the following problems :

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಿಡಿಸಿ :

a) 'VD' is an advocate to 'NM' for a case before court of civil judge. Allegation of 'NM' is that since beginning of the case, 'VD' is insisting for compromise and 'NM' was suspicious about the attitude of 'VD'. Therefore, 'NM' engaged another advocate named 'MN' along with 'VD'. Much importantly 'NM' had submitted 11 documents, to the court while filing the suit. When subsequently he verified the record of the civil suit he found that, out of 11 documents two documents were not there on record. Since 'NM' never applied for their return he verified it and on inspection, it was revealed that the documents were taken by VD.

Guide Mr. NM.

ದಿವಾನಿ ನ್ಯಾಯಾಲಯದಲ್ಲಿನ ದಾವೆಯೊಂದಕ್ಕೆ 'VD'ಯು 'NM'ನ ವಕೀಲನಾಗಿದ್ದಾನೆ. ದಾವೆಯ ಆರಂಭದಿಂದಲೂ ರಾಜಿ ಮಾಡಿಕೊಳ್ಳಲು 'VD'ಯು ನನ್ನನ್ನು ಒತ್ತಾಯಿಸುತ್ತಿದ್ದ, ಆ ಕಾರಣದಿಂದ ಆತನ ಮೇಲೆ ನನಗೆ ಅನುಮಾನವಿತ್ತು ಎಂಬುವುದು 'NM'ನ ಆರೋಪ. ಈ ಕಾರಣದಿಂದಲೇ, 'VD'ಯ ಜೊತೆಗೆ 'MN' ಎಂಬ ಹೆಸರಿನ ಮತ್ತೊಬ್ಬ ವಕೀಲನನ್ನು ನಿಯೋಜಿಸಿಕೊಂಡಿದ್ದ. ಬಹಳ ಪ್ರಮುಖವಾಗಿ, ದಾವೆ ಹೂಡುವ ಸಂದರ್ಭದಲ್ಲಿ 'NM', 11 ದಾಖಲೆಗಳನ್ನು ಸಲ್ಲಿಸಿದ್ದ. ತದನಂತರ ನ್ಯಾಯಾಲಯದ ದಾಖಲೆಗಳನ್ನು ಪರಿಶೀಲಿಸಲಾಗಿ, 11 ದಾಖಲೆಗಳ ಪೈಕಿ 2 ದಾಖಲೆಗಳು ನಾಪತ್ತೆಯಾಗಿದ್ದವು. ದಾಖಲೆಗಳ ಹಿಂಪಡೆತಕ್ಕಾಗಿ 'NM' ಯಾವತ್ತೂ ಅರ್ಜಿ ಸಲ್ಲಿಸಿರದ ಕಾರಣ, ನ್ಯಾಯಾಲಯದಲ್ಲಿ ಕೂಲಂಕುಶವಾಗಿ ಪರೀಕ್ಷಿಸಲಾಗಿ, ಎರಡು ದಾಖಲೆಗಳನ್ನು 'VD' ಪಡೆದುಕೊಂಡಿರುವುದು ತಿಳಿದು ಬಂತು.

ಮಿಸ್ಟರ್ 'NM'ಗೆ ಮಾರ್ಗದರ್ಶನ ನೀಡಿ.

b) Mr. 'P' paid a sum of Rs. 500 to the advocate 'Q' to file a suit for recovery of the amount due to him from a company. When the brother-in-law of 'P' met Q to enquire about the status of the case, he was informed that case was still at S.R. stage and yet to be numbered. After few days 'P' sent a letter through registered post along with Rs. 400 to the Q for taking necessary steps so that the matter may be taken up before the court. 'Q' did not send a reply and, after few days, another registered post was sent to him for which there is no reply from advocate.

Is it professional misconduct ? Decide.

'P'ನು ಕಂಪನಿಯೊಂದರಿಂದ ತನಗೆ ಬರಬೇಕಾಗಿದ್ದಂತಹ ಬಾಕಿ ಹಣಕ್ಕೆ ಸಂಬಂಧಿಸಿದಂತೆ ಕಂಪನಿ ವಿರುದ್ಧ ದಾವೆ ಹೂಡಲು 500 ರೂ.ಗಳನ್ನು ವಕೀಲನಾದ 'Q' ಗೆ ನೀಡಿದ. 'P'ನ ಭಾವ-ಮೈದುನನು 'Q'ನನ್ನು ಭೇಟಿಯಾಗಿ ದಾವೆಯ ಹಂತದ ಬಗ್ಗೆ ವಿಚಾರಿಸಲಾಗಿ, ದಾವೆಯು ಇನ್ನೂ S.R. ಹಂತದಲ್ಲಿದ್ದು, ಇನ್ನಷ್ಟೆ ದಾವೆಯ ಸಂಖ್ಯೆಯಾಗಬೇಕಾಗಿದೆ ಎಂದು ತಿಳಿಸಿದ. ಕೆಲವು ದಿನಗಳ ನಂತರ 400 ರೂ.ಗಳನ್ನು ಒಳಗೊಂಡಂತಹ ಪತ್ರವೊಂದನ್ನು ಬರೆದ 'P'ನು, ದಾವೆಯು ನ್ಯಾಯಾಲಯದ ಮುಂದೆ ಬರಲು ಅವಶ್ಯಕವಾದಂತಹ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಿದ್ದ. ವಕೀಲನು ಯಾವುದೇ ರೀತಿಯ ಉತ್ತರ ನೀಡಲಿಲ್ಲ. ಹಾಗೆಯೇ, ಕೆಲವು ದಿನಗಳ ನಂತರ ಬರೆದ ಮತ್ತೊಂದು ಪತ್ರಕ್ಕೂ ಯಾವುದೇ ಉತ್ತರವನ್ನು ವಕೀಲನಾದ 'Q' ನೀಡಲಿಲ್ಲ.

ಇದು ವೃತ್ತಿ ದುರ್ನಡತೆಯಾಗುತ್ತದೆಯೇ ? ನಿರ್ಧರಿಸಿ.

c) Advocate, Mr. Mithun makes an allegation against an additional magistrate that the magistrate had already been transferred to some other court. Instead of reporting to the court, to which he was transferred, he had heard the case and passed some orders, on account of this Mr. Mithun filed a contempt of court petition against additional magistrate for hearing and passing orders. While drafting contempt petition, Mr. Mithun has used unrestricted and filthy language against additional magistrate.

Is it professional misconduct ? Decide.

ವಕೀಲನಾದ ಮಿಸ್ಟರ್ ಮಿಥುನ್‌ನು, ಹೆಚ್ಚುವರಿ ದಂಡಾಧಿಕಾರಿಯೊಬ್ಬರು ಈಗಾಗಲೇ ವರ್ಗಾವಣೆಗೊಂಡಿದ್ದರು ಎಂದು ಆರೋಪವೊಂದನ್ನು ಮಾಡಿದ್ದಾನೆ. ವರ್ಗಾವಣೆಗೊಂಡಿದಂತಹ ಸ್ಥಳಕ್ಕೆ ವರದಿ ಮಾಡಿಕೊಳ್ಳುವ ಬದಲು ಪ್ರಕರಣವೊಂದನ್ನು ಆಲಿಸಿ ಕೆಲವು ಆದೇಶಗಳನ್ನು ಪಾಸು ಮಾಡಿದ್ದರು. ಈ ಕಾರಣಕ್ಕಾಗಿ, ಹೆಚ್ಚುವರಿ ದಂಡಾಧಿಕಾರಿಗಳ ಸುನಾವಣೆ ಹಾಗೂ ಆದೇಶಗಳಿಗಾಗಿ ಅವರ ವಿರುದ್ಧ ನ್ಯಾಯಂಗ ನಿಂದನೆ ಪ್ರಕರಣವೊಂದನ್ನು ದಾಖಲಿಸಿದ. ನ್ಯಾಯಾಂಗ ನಿಂದನೆ ಅರ್ಜಿ ರಚಿಸುವ ಸಂದರ್ಭದಲ್ಲಿ ಹೆಚ್ಚುವರಿ ದಂಡಾಧಿಕಾರಿಯ ವಿರುದ್ಧ ಕೆಲವು ಅನಿಯಂತ್ರಿತ ಹಾಗೂ ಅಶ್ಲೀಲವಾದಂತಹ ಭಾಷೆಯನ್ನು ಬಳಸಿದ್ದಾನೆ.

ಇದು ವೃತ್ತಿ ದುರ್ನಡತೆಯಾಗುತ್ತದೆಯೇ ? ನಿರ್ಣಯಿಸಿ.